ಸಾಕ್ಷಿಯನ್ನು ದಿಃ 03-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ.ಎಸ್ ಎಮ್ ಎಚ್ ವಕೀಲರಿಂದಃ (ಪ್ರತಿವಾದಿ ಪರವಾಗಿ)**

ನಾನು ITI ವರೆಗೆ ಓದಿದ್ದೇನೆ. ನಾನು ಗದಗನಲ್ಲಿ ಎಸ್ ಎಸ್ ಎಲ್ ಸಿ ಓದಿದ್ದೇನೆ. ನಾನು 1992-93 ನೇ ಸಾಲಿನಲ್ಲಿ ಲಕ್ಕುಂಡಿಯಲ್ಲಿ ಎಸ್ ಎಸ್ ಎಲ್ ಸಿ ಮುಗಿಸಿದ್ದೇನೆಂದರೆ ಸರಿಯಲ್ಲ. ನಾನು, ವಾದಿ, ಪಿ ಡಬ್ಲೂಃ 2 ಸಹಪಾಠಿಗಳು ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರಕಾಶ ಅರಹುಣಿಸಿ ಸಹೋದರರು ಎಂದರೆ ಸರಿ. ನನ್ನ ಮುಖ್ಯವಿಚಾರಣೆ ವಾದಿ ಬಸವರಾಜ ಬರೆಸಿದ್ದಾರೆ. ನನ್ನ ಮುಖ್ಯವಿಚಾರಣೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನನಗೆ ದಾವಾ ಆಸ್ತಿ ಸಂಖ್ಯೆ ಗೊತ್ತಿಲ್ಲ. ಆದರೆ ಚೆಕ್ಕುಬಂದಿ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಇದೆ. ದಾವಾ ಆಸ್ತಿ ಆರ್ ಸಿಸಿ ಮನೆ ಎಂದರೆ ಇರಬಹುದು. ಒಮ್ಮೆ ಮಾತ್ರ ನೋಡಿದ್ದೇನೆ ಹಾಗಾಗಿ ಮನೆಯ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. 2021 ರಲ್ಲಿ ದಾವಾ ಆಸ್ತಿ ಎಷ್ಟು ಬೆಲೆ ಬಾಳುತ್ತಿತ್ತು ಗೊತ್ತಿಲ್ಲ. ದಾವಾ ಆಸ್ತಿ 2021 ರಲ್ಲಿ ಸುಮಾರು 30 ಲಕ್ಷ ಬೆಲೆಬಾಳುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಕರಾರು ಪತ್ರದಲ್ಲಿ ಬರೆದಷ್ಟು ಬೆಲೆ ಬಾಳುತ್ತಿತ್ತು ಎಂದು ಹೇಳುತ್ತಾರೆ.

ಪ್ರತಿವಾದಿ ನಮಗೆ ವೈಯಕ್ತಿಕವಾಗಿ ಭೇಟಿಯಾಗಿ ದಾವಾ ಆಸ್ತಿ ಮಾರುತ್ತಿರುವುದಾಗಿ ಹೇಳಿಲ್ಲ ಆದರೆ ಸುರೇಶ ಕವಲೂರ ಇವರಿಗೆ ಹೇಳಿದ್ದರು. ನಂತರ ಸುರೇಶ ಕವಲೂರು ನಮಗೆ ಹೇಳಿದ್ದು, ಆದರೆ ಹೇಳಿದ ದಿನಾಂಕ ಗೊತ್ತಿಲ್ಲ. ದಿಃ 18/04/2021 ರಂದು ನಾವು ಪ್ರತಿವಾದಿಯ ಮನೆಗೆ ಹೋಗಿದ್ದೆವು. ನಮ್ಮ ಸಮಕ್ಷಮ ಖರೀದಿ ಮಾತುಕತೆ ಆಯಿತು. ಪ್ರತಿವಾದಿ ತನ್ನ ಆಸ್ತಿಗೆ ಎಷ್ಟು ಬೆಲೆ ಹೇಳಿದ್ದರು ನೆನಪಿಲ್ಲ ಆದರೆ ಮಾತುಕತೆಯ ನಂತರ ರೂ.7,35,000/- ಗಳಿಗೆ ವ್ಯವಹಾರ ಮುಗಿದಿತ್ತು. ಪ್ರತಿವಾದಿಯ ಮನೆಗೆ ನಾವು ಹೋದಾಗ ಸಾಯಂಕಾಲ ಆಗಿತ್ತು ಆದರೆ ಸಮಯ ನೆನಪಿಲ್ಲ. ಚಾಪಾ ಕಾಗದವನ್ನು ದಿಃ 19/04/2021 ರಂದು ವಾದಿ ಗದಗದಿಂದ ತಂದರು. ನಾವು ದಿಃ 18/04/2021 ರಂದು ಮತ್ತು ದಿಃ 19/04/2021 ರಂದು ಪ್ರತಿವಾದಿಯರ ಮನೆಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ 18/04/2021 ರಂದು ನಾವು ಪ್ರತಿವಾದಿಯರ ಮನೆಗೆ ಹೋದಾಗ ಪ್ರತಿವಾದಿ ಹಾಗೂ ಅವರ ಮಗ ಇದ್ದರು. ದಿಃ 19/04/2021 ರಂದು ಕಾಗದ ಬರೆದಾಗ ಸಂಜೆ 6-00 ಗಂಟೆಯ ಮೇಲೆ ಆಗಿತ್ತು. ಆ ದಿನ

ವಾದಿ ಪ್ರತಿವಾದಿಗೆ ರೂ.2 ಲಕ್ಷ ಹಣ ನೀಡಿದ್ದರು. ಸದರಿ ಹಣವನ್ನು ವಾದಿ ಎಲ್ಲಿಂದ ತಂದಿದ್ದರು ಗೊತ್ತಿಲ್ಲ. ಸದರಿ ಹಣ ಎಷ್ಟು ಮುಖಬೆಲೆಯ ನೋಟುಗಳಾಗಿದ್ದವು ಹೇಳಲು ಬರುವುದಿಲ್ಲ. ದಾಖಲೆ ಬರೆದ ನಂತರ ಮೊದಲು ಸುರೇಶ ಸಹಿ ಮಾಡಿದ್ದು ನಂತರ ನಾನು ಸಹಿ ಮಾಡಿದ್ದೇನೆ. ಆ ನಂತರ ಕಾಗದ ಬರೆದ ಪ್ರಕಾಶ ಅರಹುಣಸಿ ಸಹಿ ಮಾಡಿದರು. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದರು ಗೊತ್ತಿಲ್ಲ. ಪ್ರತಿವಾದಿ ಯಾವುದೇ ಖರೀದಿ ವಚನ ಪತ್ರ ಬರೆದುಕೊಟ್ಟಿಲ್ಲ ಹಾಗೂ ವಾದಿಯಿಂದ ರೂ.2 ಲಕ್ಷ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಿನ ವಾದಿ ನೀಡಿದ ಹಣವನ್ನು ಪ್ರತಿವಾದಿಯೇ ಎಣಿಸಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ನಾನು, ವಾದಿ , ಪಿ ಡಬ್ಲೂ: 2 ಗೆಳೆಯರಾಗಿರುವುದರಿಂದ ಎಲ್ಲರೂ ಸೇರಿ ಖೊಟ್ಟಿ ಖರೀದಿ ವಚನ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಹೆಚ್ಚಿನ ಬೆಲೆಯ ದಾವಾ ಆಸ್ತಿಯನ್ನು ವಾದಿಗೆ ಕೊಡಿಸುವ ಉದ್ದೇಶದಿಂದ ಖೊಟ್ಟಿ ದಾಖಲೆ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ. ಕರಾರು ಪತ್ರ ಬರೆದ ನಂತರ ಅದನ್ನು ನೋಂದಣಿ ಮಾಡಿಸುವಂತೆ ನಾನು ಹೇಳಿಲ್ಲ, ಆದರೆ ಅಲ್ಲಿದ್ದವರು ನೋಟರಿ ಮಾಡಿಸುವುದಾಗಿ ಮಾತಾಡುತ್ತಿದ್ದರು ಎಂದು ಹೇಳುತ್ತಾರೆ. ದಾವಾ ಕಾಗದ ಪತ್ರವನ್ನು ನೋಟರಿ ಮಾಡಿಸುವಾಗ ನಾನು ಹೋಗಿದ್ದೆ. ಕಾಗದ ಬರೆದ ದಿನವೆ ನೋಟರಿ ಮಾಡಿಸಲಾಯಿತು. ದಾಖಲೆಯನ್ನು ನೋಟರಿ ಮಾಡಿಸಿದ ವಿಷಯ ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಸ್ನೇಹಿತನಾಗಿದ್ದರಿಂದ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.